# ಮತ್ತೊಮ್ಮೆ

ನನಗೊಂದು ನಿನಗೊಂದು ಎಂದು ಆಡುತ್ತಿದ್ದ ಗಳಿಗೆ
ಚಿಕ್ಕ ಚಿಕ್ಕ ಮನೆ ಕಟ್ಟಿ ಮದುವೆ ಮಾಡಿ
ಪಾರಿಜಾತದ ಎಲೆ ಮೇಲೆ ಕಡಲೆಕಾಳುಗಳ ಊಟ ಮಾಡಿದ್ದ ನೆನಪು
ಮಳೆಹನಿಗಳು ಮನೆ ಬೀಳಿಸಿದಾಗ ಅಳು ಕೆನ್ನೆಯ ಮೇಲೆ ಉಪ್ಪುಪ್ಪು ಹನಿ


ಸೈಕಲ್ ಕಲಿಯುತ್ತ ಬಿದ್ದಾಗ ನೀನು ಕಿಟಕಿಯಿಂದ ನೋಡಿ ನಕ್ಕಿದ್ದು
ಸಿಟ್ಟು ಬರಿಸಿತ್ತು...
ಅದೆ ನಿನಗೆ ನಾನು ಕಲಿಸುವಾಗ
ಸೀಟಿಗೆ ಸಿಕ್ಕಿ ಅಂಗಿ ಹರಿದರೂ ಜಗತ್ತು ಮರೆತಿದ್ದೆ.

ನೀನು ದೊಡ್ಡ ಲಂಗ ಹಾಕಿದಾಗ
ಮುಡಿದ ಮಲ್ಲಿಗೆ ವಾಸನೆ ನಾನು ನೋಡಿದ್ದು ಮತ್ತೆ ನೀನು
ನಾಚಿ ಒಳಗೋಡಿದ್ದು ಇನ್ನು ಮನಸ್ಸಿನ ಚಿತ್ರದಲ್ಲಿದೆ

ಎಲ್ಲೊ ದಾರಿ ಬೇರೆಯಾದವು ತಿಳಿಯಲೇ ಇಲ್ಲ
ಹಂಚಿ ಹೊದ ಕನಸುಗಳನ್ನೆಲ್ಲ ಮತ್ತೆ ಅಂಟಿಸಲೇ ಇಲ್ಲ

ನೆನಪುಗಳಿಗೆ ಕೊರತೆ ಇಲ್ಲ ಬರುತ್ತವೆ ತಂಗಾಳಿಯಲ್ಲಿ
ಬಿರುಗಾಳಿಯಲ್ಲಿ ಚದುರಿದ ಎಲೆಗಳಾಗಿ
ತುಸು ಹಸಿ ತುಸು ಹಸಿರಾಗಿ

ಕಾಯುತ್ತಿರುವೆ ಚಂಡಮಾರುತವ
ಜಗವೆಲ್ಲ ಹೊಸತಾಗಿ ಮೂಡಿಸಲು
ಮತ್ತದೆ ನೆನಪಿನ ದಿನಗಳ ನನಗೆ ಕೊಡಲು
ನಾನು ನೀನು ಮತ್ತು ಆ ಚಿಕ್ಕಮನೆಗಳ
ಚಿಕ್ಕಮನಗಳ ಆಟವಾಡಲು



● ಗಿರೀಶ ನಾನಾವಟೆ

ಕಲೆ: ವಾಗೀಶ ಹೆಗಡೆ

